Mr. SPEAKER.—The Hon'ble Member may see the list if he wants; it is a long list as the Hon'ble Deputy Minister has said already. Question 746 may be taken up.

ಶ್ರೀ ಎ. ಜೆ. ದೊಡ್ಡಮೇಟಿ.—ನನಗೆ ಈ ಪ್ರಶ್ನೆ ಕೇಳುವುದಕ್ಕೆ ಎರಡು ತೊಂದರೆ ಬಂದಿದೆ. ಈ ಪ್ರಶ್ನೆಗೆ ವಿದ್ಯಾಶಾಖೆಯ ಮಂತ್ರಿ ಶ್ರೀ ಕಂಠಿಯವರಿಂದ ಉತ್ತರ ಬಂದಿದೆ. ಅವರನ್ನೇ ಕೇಳುವ ಕೆಲವು ಸಮಸ್ಯೆಗಳಿವೆ. ಮಾನ್ಯ ಡೆಪ್ಯುಟಿ ಮಿನಿಸ್ಟರವರಿಗೆ ಕನ್ನಡದಲ್ಲಿ ಉತ್ತರ ಹೇಳಲು ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು.—ನಿಮಗೆ ಇಂಗ್ಲೀಷು ಬರುತ್ತದೆ ಅಲ್ಲವೆ, ಕೇಳಿ.

ಶ್ರೀ ಎ. ಜೆ. ದೊಡ್ಡಮೇಟಿ.—ನನಗೆ ಇಂಗ್ಲೀಷು ಬರುವುದಿಲ್ಲ. ಕನ್ನಡ ಪ್ರತಿಯೂ ಇಲ್ಲಿ ಇಲ್ಲ. ವಿತ್‌ಹೋಲ್ಡ್ ಮಾಡುವುದು ಒಳ್ಳೆಯದು. ತಾವು ಅಪ್ಪಣೆ ಕೊಟ್ಟ ಹಾಗೆ ಮಾಡುತ್ತೇನೆ.

Mr. SPEAKER.—I have no right in the matter at all. It is for the Government and the Hon'ble Member.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈವರೆಗೂ ತಾವು ಕನ್ನಡ ಪ್ರತಿ ಸಪ್ಲೈ ಮಾಡುತ್ತಾ ಇದ್ದಿರಿ, ಇವತ್ತು ಸಪ್ಲೈ ಮಾಡಿಲ್ಲ. ಕನ್ನಡ ಪ್ರತಿ ಸಪ್ಲೈ ಮಾಡಿದ ಮೇಲೆ ಕೊಶ್ಚನ್ ಹಾಕುವುದು ಉತ್ತಮ.

Mr. SPEAKER.—The Hon'ble Member who has put the question wants to be taken up on some other day when the Minister for Education is present.

Sri S. NIJALINGAPPA (Chief Minister).—Yes, Sir. I enquired about the health of the Education Minister this morning. It may take two weeks for him to get allright because his lungs are affected.

Mr. SPEAKER.—We will hold it over.

Establishment of a Factory at Kolar Gold Fields for manufacturing small Tractors and Bulldozers.

*Q.—785. **Sri E. NARAYANA GOWDA** (Bangarpet).—

Will the Government be pleased to state :—

(*a*) whether it is a fact that the Chief Minister had promised to establish a factory at Kolar Gold Field for manufacturing small tractors and bulldozers;

(*b*) the steps they have taken in this behalf;

(*c*) the time within which the same will be established?

A.—**Sri K. MALLAPPA** (Minister for Industries and Commerce).—

(*a*) Chief Minister had promised to urge the Government of India to establish a Heavy Earth Moving Factory in K.G.F. area.

(*b*) Government of India have agreed to establish the heavy earth moving machinery factory in K.G.F.

(*c*) It is expected that Government of India will take steps very early.

ಶ್ರೀ ಇ. ನಾರಾಯಣ ಗೌಡ.—ಈ ಫ್ಯಾಕ್ಟರಿಗೆ ಬರೀ ಕೇಂದ್ರಸರ್ಕಾರದ ಬಂಡವಾಳವೋ, ಅಥವಾ ಮೈಸೂರು ಸರಕಾರದ ಬಂಡವಾಳವೂ ಇದೆಯೋ?

†ಶ್ರೀ ಕೆ. ಮಲ್ಲಪ್ಪ.—ಈ ಕಂಪೆನಿ ಇನ್ನೂ ಸ್ಥಾಪನೆಯಾಗಿಲ್ಲ.

ಶ್ರೀ ಇ. ನಾರಾಯಣ ಗೌಡ.—ಈಗಾಗಲೇ ಇದಕ್ಕೋಸ್ಕರ ಸೈಟ್ ಸೆಲೆಕ್ಟ್ ಮಾಡಿದ್ದಾರೆಯೆ? ಎಷ್ಟು ಎಕರೆ ಆಕ್ಷಯರ್ ಮಾಡಿದ್ದಾರೆ?

ಶ್ರೀ ಕೆ. ಮಲ್ಲಪ್ಪ.—ಪ್ರೊವಿಶನಲ್ಲಾಗಿ ಸೆಲೆಕ್ಟ್ ಮಾಡಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದರಲ್ಲಿ ಆಗಲೇ ಫ್ಯಾಕ್ಟರಿಗೆ ಜನರಲ್ ಸೆಲೆಕ್ಷನ್ ನಡೆಯುತ್ತಾ ಇದೆ ಅಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಅರ್ಜಿಗಳನ್ನು ಕರೆದು, ತಾತ್ಕಾಲಿಕವಾಗಿ ಕೆಲವು ಇಂಜನಿಯೆರುಗಳನ್ನು ಎಚ್. ಎ. ಎಲ್. ನವರು ಇಂಟರ್‌ವ್ಯೂ ಮಾಡಿದ್ದಾರೆ.

Sri GANJI VEERAPPA.—Will the Government hope that the unemployment problem that would be created by closing the K.G.F. Mines, would be solved by this ?

Sri K. MALLAPPA.—It cannot be solved. We do not know how many people would be thrown out of employment. To what extent this factory could accommodate all this could be assessed only at that time.

Sri S. RAJAGOPAL.—May I know how many people would be absorbed by this factory ?

Sri K. MALLAPPA.—Proposals have not been formulated yet. Government of India has to accept it and projects will have to be formulated and prepared. Then, this question will have to be considered.

ಶ್ರೀ ವಿ. ಮಸಿಯಪ್ಪ.—ಸ್ವಾಮಿ, ಇವರು ಪ್ರಶ್ನೆ ಕೇಳಿರತಕ್ಕಂಥಾದ್ದು, ನಣ್ಣ ಟ್ರಾಕ್ಟರುಗಳು ಮತ್ತು ಬುಲ್‌ಡೋಜರುಗಳ ಕಾರ್ಖಾನೆ ಬಗ್ಗೆ ತಾವು ಉತ್ತರದಲ್ಲಿ ಹೆವಿ ಆರ್ತ್ ಎಕ್ವಿಪ್‌ಮೆಂಟ್ ಫ್ಯಾಕ್ಟರಿ ಕೆ.ಜಿ.ಎಫ್. ಏರಿಯಾದಲ್ಲಿ ಸ್ಥಾಪನೆ ಮಾಡಲು ಒತ್ತಾಯ ಮಾಡಿದೆ ಎಂದು ಅಪ್ಪಣೆ ಕೊಡಿಸಿದಿರಿ. ನಣ್ಣ ಟ್ರಾಕ್ಟರುಗಳನ್ನು ತಯಾರು ಮಾಡತಕ್ಕ ಕಾರ್ಖಾನೆಯನ್ನು ಎಲ್ಲಿ ಸ್ಥಾಪನೆ ಮಾಡುತ್ತೀರ ?

ಶ್ರೀ ಕೆ. ಮಲ್ಲಪ್ಪ.—ನಣ್ಣ ಟ್ರಾಕ್ಟರುಗಳ ಫ್ಯಾಕ್ಟರಿ ಸ್ಥಾಪನೆ ಮಾಡತಕ್ಕಂಥಾದ್ದು ಇನ್ನೂ ನಿರ್ಧಾರವಾಗಿಲ್ಲ. ಪವರ್ ಟಿಲ್ಲರುಗಳ ತಯಾರಿಕೆ ಫ್ಯಾಕ್ಟರಿ ಸ್ಥಾಪನೆ ಮಾಡಬೇಕೆಂದು ಅಪ್ಲಿಕೇಷನ್ ಹಾಕಿದೆ, ಅದಕ್ಕೆ ಲೈಸೆನ್ಸು ಕೊಡಲೂ ಒಪ್ಪಿಕೊಂಡಿದ್ದಾರೆ ಇಂಡಿಯ ಗವರ್ನ್‌ಮೆಂಟಿನವರು.

Sri S. M. KRISHNA.—Will the proposed factory be in the public sector or the private sector ?

Sri K. MALLAPPA.—It would be a public sector industry, Sir.

ಶ್ರೀ ಇ. ನಾರಾಯಣ ಗೌಡ.—ಈ ಕೈಗಾರಿಕೆಯ ಮ್ಯಾನೇಜ್‌ಮೆಂಟು ಕೇಂದ್ರ ಸರ್ಕಾರದ ಆಡಳಿತದಲ್ಲಿದೆಯೆಂದು ಹೇಳುತ್ತಾ ಇದ್ದೀರಿ. ಇದರಲ್ಲಿ ಮೈಸೂರು ಸರಕಾರದ ಪಾತ್ರವೇನು ?

ಶ್ರೀ ಕೆ. ಮಲ್ಲಪ್ಪ.—ಮೈಸೂರು ಸರಕಾರದ ಪಾತ್ರ ಜಾಗ ಕೊಡುವುದು, ಪವರ್, ನೀರು ಕೊಡುವುದು, ಇಷ್ಟೇ. ಪಬ್ಲಿಕ್ ಸೆಕ್ಟಾರ್ ಇಂಡಸ್ಟ್ರಿ ಆದರೆ ಅದರ ಬಂಡವಾಳವನ್ನೆಲ್ಲಾ ಬಹುಶಃ ಅವರೇ ವಹಿಸಿಕೊಳ್ಳುತ್ತಾರೆ ಎಂದು ಕಾಣಿಸುತ್ತದೆ.

Sri K. S. SURYANARAYANA RAO.—Sir, some time back a small tractor was assembled and developed at Hebbal. Is there any proposal to put up such a factory at K.G.F. or anywhere else ?

Sri K. MALLAPPA.—So far as the Government is concerned, we have not formulated any proposal. An application was made for the manufacture of power tiller and it has been considered by the Government of India.

ಶ್ರೀಮತಿ ನುಶೀಲಾಬಾಯಿ ಹೀರಾಚಂದ್ ಷಾ.—ಈ ಟ್ರಾಕ್ಟರುಗಳು ಜನತೆಗೆ ಯಾವಾಗ ಸಿಕ್ಕಬಹುದು ?

ಶ್ರೀ ಕೆ. ಮಲ್ಲಪ್ಪ.—ಅವು ತಯಾರಾದಮೇಲೆ ಸಿಕ್ಕುತ್ತವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಮ್ಮ ಸರ್ಕಾರಕ್ಕೆ ಗೊತ್ತಿರುವಷ್ಟು ಮಟ್ಟಿಗೆ, ಇಂಡಿಯಾ ಸರಕಾರದವರು ಈ ಕಾರ್ಖಾನೆಯಲ್ಲಿ ಎಷ್ಟು ಬಂಡವಾಳ ಹೂಡುತ್ತಾರೆ ?

ಶ್ರೀ ಕೆ. ಮಲ್ಲಪ್ಪ.—ಈಗಲೇ ಹೇಳುವುದಕ್ಕೆ ಸಾಧ್ಯವಿಲ್ಲ. It is somewhat premature; we cannot say how much capital would be invested. Anyway, they have communicated their approval.

Sri S. RAJAGOPAL.—To solve the large scale unemployment problem, has the Government thought of any proposal to start any industry at K.G.F ?

Sri K. MALLAPPA.—We have already licenced re-rolling mill of 5,000 tons of rolling capacity. A licence has been granted and we are also trying to get one or two spinning mills started. There is also a proposal to start a sugar factory and an application has been recommended to Gowribidnur area.

Sri GANJI VEERAPPA.—Am I correct if I say that the main object to start this factory is to give employment to the people who would be displaced in the Mines ?

Sri K. MALLAPPA.—That was the idea with the apprehension that one of the mines would be closed and people would be thrown out of employment. The Chief Minister wrote a letter to the Central Government and the Central Government was pleased to sanction the scheme and the details are now being worked out.

1-00 P.M.

ಶ್ರೀ ಎಸ್. ಗೋಪಾಲ ಗೌಡ.—ಈ ಕಾರ್ಖಾನೆಯನ್ನು ಮೂರನೆಯ ಪಂಚಪಾರ್ಷಿಕ ಯೋಜನೆಯಲ್ಲಿ ಮೊದಲೇ ಸೇರಿಸಿದ್ದರೋ ಅಥವಾ ಕೋಲಾರದ ಬಂಗಾರದ ಗಣಿಗಳನ್ನು ಮುಚ್ಚಿ ಬೇಕು ಎನ್ನುವ ತೀರ್ಮಾನಕ್ಕೆ ಕೇಂದ್ರ ಸರ್ಕಾರ ಬಂದಮೇಲೆ ಅಲ್ಲಿಯ ಜನರಿಗೆ ಬೇರೆ ಉದ್ಯೋಗ ಕಲ್ಪಿಸುವ ದೃಷ್ಟಿಯಿಂದ ಈ ಕಾರ್ಖಾನೆಯನ್ನು ಮಾಡಬೇಕೆಂದು ಪ್ರಪೋಸಲ್ ಬಂದಿದೆಯೋ ?

ಶ್ರೀ ಕೆ. ಮಲ್ಲಪ್ಪ.—Heavy earth moving equipment ಯೋಜನೆಯನ್ನು ಮೂರನೆಯ ಯೋಜನೆಯಲ್ಲಿ ಸೇರಿಸಿದ್ದಿಲ್ಲ. ಇತ್ತೀಚೆಗೆ ಬಂಗಾರದ ಗಣಿಗಳಲ್ಲಿ ನಿರುದ್ಯೋಗ ಸಮಸ್ಯೆ ಉದ್ಭವ ವಾಗುತ್ತದೆಂದು ತಿಳಿದುಕೊಂಡು ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಬರೆದರು. ಕೇಂದ್ರ ಸರ್ಕಾರ ಒಪ್ಪಿಕೊಂಡ ವಿಷಯವಾಗಿದೆ ಇದು.

ಶ್ರೀ ಬಿ. ಚನ್ನಬೈರೇಗೌಡ.—ಈಗಾಗಲೇ ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿ ಭೇಕಾದಷ್ಟು ಕಾರ್ಖಾನೆಗಳಿರುವುದರಿಂದ ಇದನ್ನು ಕೋಲಾರದಲ್ಲಿ ಅಥವಾ ಬಂಗಾರುಪೇಟೆಯಲ್ಲಿ ಸ್ಥಾಪನೆ ಮಾಡುವುದಕ್ಕೆ ಯೋಚನೆಮಾಡುತ್ತೀರಾ ?

Mr. SPEAKER.—Who is going to locate it ? Is it the Central Government ?

ಶ್ರೀ ಬಿ. ಚನ್ನಬೈರೇ ಗೌಡ.—ಕೋಲಾರದಲ್ಲಿ ಬೇಕಾದಷ್ಟು ಕಾರ್ಖಾನೆಗಳಿರುವುದರಿಂದ ಕೋಲಾರ ಅಥವ ಬಂಗಾರುಪೇಟೆಯಲ್ಲಿ ಈ ಕಾರ್ಖಾನೆಯನ್ನು ಏಕೆ ಪ್ರಾರಂಭ ಮಾಡಬಾರದು ?

ಶ್ರೀ ಕೆ. ಮಲ್ಲಪ್ಪ.—ಅದಕ್ಕೆ ಕೆಲವು ಸೌಕರ್ಯಗಳು ಬೇಕಾಗುತ್ತವೆ. ಮನಸ್ಸಿಗೆ ಬಂದ ಸ್ಥಳದಲ್ಲಿ ಹಾಕುವುದಕ್ಕೆ ಬರುವುದಿಲ್ಲ. ಬೇಕಾಗುವ ಸೌಕರ್ಯಗಳಿವೆ ಎಂದು ಕೇಂದ್ರ ಸರ್ಕಾರದವರು ಒಪ್ಪಬೇಕು. ಅವರು ಒಪ್ಪುವ ಅನುಕೂಲವಾದ ಸ್ಥಳದಲ್ಲಿ ಅದನ್ನು ಹಾಕಬೇಕಾಗುತ್ತದೆ.

Sri S. SIVAPPA.—May I know with whose collaboration the Central Government is going to start this factory ? Is there any foreign collaboration ?

Sri K. MALLAPPA.—It is going to be a public sector industry started by the Government of India. There is no question of State Government's collaboration in it. Whether there would be foreign collaboration or not this has not yet been decided.